**ಮರು ಪ್ರಮಾಣೀಕರಿಸಲಾದ ದಿನಾಂಕ : 17.06.2026.**

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.H.S.B ವಕೀಲರಿಂದ</u> :-**

ನನ್ನ ತಂದೆಯ ಹೆಸರು ಮಹಾದೇವಯ್ಯ. ನನ್ನ ತಂದೆಯ ಹೆಸರು ಮುದ್ದಯ್ಯ. ಸದರಿ ಮುದ್ದಯ್ಯನ ಮಕ್ಕಳು ಮಲ್ಲಯ್ಯ ಹಾಗೂ ಮಹಾದೇವಯ್ಯ. ಮುದ್ದಯ್ಯನವರ ಹೆಣ್ಣು ಮಕ್ಕಳುಗಳು ನಿಂಗವ್ವ ಹಾಗೂ ಗಂಗವ್ವ. ಒಟ್ಟು ಅವರಿಗೆ 4 ಜನ ಮಕ್ಕಳು. ಮಲ್ಲಯ್ಯನವರು ಜೀವಂತವಾಗಿಲ್ಲ ಹಾಗೂ ಅವರು ತೀರಿ ಹೋಗಿರುತ್ತಾರೆ. ಮಲ್ಲಯ್ಯನವರಿಗೆ ಒಟ್ಟು 7 ಜನ ಮಕ್ಕಳಿದ್ದು, ಅವರುಗಳ ಪೈಕಿ 3 ಜನ ಗಂಡು ಮಕ್ಕಳು, ಅವರುಗಳು 3ನೇ ಪ್ರತಿವಾದಿಯಿಂದ 5ನೇ ಪ್ರತಿವಾದಿಗಳು, ನಂತರ 4 ಜನ ಹೆಣ್ಣು ಮಕ್ಕಳಿದ್ದು ಅವರುಗಳ ಹೆಸರು ರೇಣುಕಮ್ಮ, ಸುಲೋಚನಾ, ಅನಸೂಯ ಮತ್ತು ಯಶೋಧಮ್ಮ. ನಾನು ಈ ದಾವೆಯನ್ನು ಭಾಗಾಂಶ ಕೋರಿ ಹೂಡಿರುತ್ತೇನೆ. ದಾವಾ ಸ್ವತ್ತುಗಳೆಲ್ಲವೂ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಅದು ನಮ್ಮ ತಾತ ಮುದ್ದಯ್ಯನವರಿಗೆ ಸೇರಿದ ಆಸ್ತಿಗಳಾಗಿರುತ್ತದೆ. ಈ ದಾವೆಯಲ್ಲಿ ಮುದ್ದಯ್ಯನವರ ಹೆಣ್ಣು ಮಕ್ಕಳುಗಳನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ. ಅದೇ ರೀತಿ ಮಲ್ಲಯ್ಯನವರ ಹೆಣ್ಣು ಮಕ್ಕಳನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ನನ್ನ ತಂದೆಯವರಿಗೆ ದಾವಾ ಸ್ವತ್ತುಗಳು ಅವರ ತಂದೆಯಿಂದ ಬಂದಿರುತ್ತದೆ. ನಮ್ಮ ತಂದೆಯವರಿಗೆ ಆಸ್ತಿಗಳು ಪಾರೀಕತ್ತಿನ ಮುಖಾಂತರ ಬಂದಿರುತ್ತದೆ. ಸದರಿ ಪಾರೀಕತ್ತು 1ನೇ ಪ್ರತಿವಾದಿಗೆ ಹೆಸರಿನಲ್ಲಿ ಇರುತ್ತದೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಂಗಮ್ಮನವರ ಗಂಡನ ಹೆಸರು ಮುದ್ದಬೋರಯ್ಯ. ಗಂಗಮ್ಮನವರ ಗಂಡನ ಹೆಸರು ಶಿವಯ್ಯ.

**<u>ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**sd/-**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**